**<u>ಸಾಕ್ಷಿಯನ್ನು ದಿನಾಂಕ 30.10.2023 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ ವಿ ಎಸ್ ವಕೀಲರಿಂದಃ</u>**

ಎಸ್.ಎಂ.ದಾನಪ್ಪರವರಿಂದ ಮುನಿಯಪ್ಪ ತಂದೆ ತಳಗವಾರ್ ಖಾತರ್ಗಾ ರವರು ದಾವಾ ಐಟಂ.ನಂ.1 ನ್ನು ದಿನಾಂಕ 15.03.1954 ರಂದು ಖರೀದಿಸಿದ ಬಗ್ಗೆ ಕ್ರಯಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 18 ಎಂದು ಗುರುತಿಸಲಾಯಿತು. (ನಿಪಿ 18 ರ ಪ್ರಥಮ ಪುಟದಲ್ಲಿ ಹಸಿರು ಬಣ್ಣದ ಪೆನ್ನಿನಿಂದ ಬರವಣಿಗೆಯ ಮೇಲೆ ಬಣ್ಣವನ್ನು ಹಾಕಲಾಗಿರುತ್ತದೆ. **<u>ನಿಪಿ 18</u>** ರ ಬೆರಳಚ್ಚು ಪ್ರತಿಯನ್ನು ಹಾಜರುಪಡಿಸುವ ನಿರ್ದೇಶನದ ಮೇರೆಗೆ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಲಾಗಿರುತ್ತದೆ)

ಕಂದಾಯ ಪಾವತಿ ರಶೀದಿಯನ್ನು ಹಾಜರು ಮಾಡಿದ್ದು ಅದನ್ನು **<u>ನಿಪಿ 19</u>** ಎಂದು, ದಾವಾ ಐಟಂ.ನಂ.2 ಕ್ಕೆ ಸಂಬಂಧಿಸಿದ 1965 ನೇ ಸಾಲಿನಿಂದ 1992 ನೇ ಸಾಲಿನವರೆಗಿನ 4 ಕೈ ಬರಹದ ಆರ್ ಟಿ ಸಿ ಗಳ ದೃಡೀಕೃತ ನಕಲುಗಳನ್ನು ಹಾಜರು ಪಡಿಸಿದ್ದು ಅವುಗಳನ್ನು **<u>ನಿಪಿ 20 ರಿಂದ 23</u>** ಎಂದು, ದಾವಾ ಐಟಂ.ನಂ.2 ಕ್ಕೆ ಸಂಬಂಧಿಸಿದ 4 ಗಣಕೀಕೃತ ಆರ್ ಟಿ ಸಿ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು **<u>ನಿಪಿ 24 ರಿಂದ 27</u>** ಎಂದು, ದಿನಾಂಕ 28.10.2017 ರಂದು ತಹಸೀಲ್ದಾರ್ ರವರು ನೀಡಿದ ಹಿಂಬರಹವನ್ನು ಹಾಜರು ಮಾಡಿದ್ದು ಅದನ್ನು **<u>ನಿಪಿ 28</u>** ಎಂದು, ದಾವಾ ಐಟಂ.ನಂ.1 ರ 5 ಕೈ ಬರಹದ ಆರ್ ಟಿ ಸಿ ಗಳ ದೃಡಿಕೃತ ನಕಲುಗಳನ್ನು ಹಾಜರು ಮಾಡಿದ್ದು ಅವುಗಳನ್ನು **<u>ನಿಪಿ 29 ರಿಂದ 33</u>** ಎಂದು, ದಾವಾ ಐಟಂ.ನಂ.1 ಕ್ಕೆ ಸಂಬಂಧಿಸಿದ 13 ಗಣಕೀಕೃತ ಆರ್ ಟಿ ಸಿ ಗಳನ್ನು ಹಾಜರು ಮಾಡಿದ್ದು ಅವುಗಳನ್ನು **<u>ನಿಪಿ 34</u>**

**ರಿಂದ 46** ಎಂದು, ಎಂ.ಆರ್.ನಂ.3/2007.2008 ರ ಮ್ಯುಟೇಷನ್ ಪ್ರತಿಯನ್ನು ಹಾಜರು ಮಾಡಿದ್ದು ಅದನ್ನು **ನಿಪಿ 47** ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಸಮಯಕೋರಿದ್ದರಿಂದ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.